ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಯೋಗೀಶ್‌ಭಟ್‌ರವರ ಲೆಕ್ಕಾಚಾರ ಕರೆಕ್ಟ್ ಆಗಿರುತ್ತದೆ. 22 ಕೋಟಿ ರೂಪಾಯಿ ಬಾಕಿ ಇದೆ ಎಂದು ನನಗೆ ಮಾಹಿತಿ ಬಂದಿದೆ, ಮತ್ತೆ ಇದಕ್ಕಿಂತ ಹೆಚ್ಚೂ ಕೂಡ ಇರಬಹುದು. ಇಷ್ಟೊಂದು ಇಲ್ಲ ಎಂದು ನಾನು ಇದರ ಬಗ್ಗೆ ಡಿಸ್‌ಪ್ಯೂಟ್ ಹೋಗುವುದಿಲ್ಲ. ನಾವು ರಿಲೀಜ್ ಮಾಡತಕ್ಕಂಥ ಸಂದರ್ಭದಲ್ಲಿ ಅದನ್ನೂ ಕೂಡ ಕನ್ಸಿಡರ್ ಮಾಡುತ್ತೇನೆ. ಸ್ಪೆಷಲ್ ಎಕನಾಮಿಕ್ ಜೋನ್ ಬಗ್ಗೆ ತಾವು ಕೇಳಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ಒಂದು ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿಕೊಡಿ. ಇದಕ್ಕೆ ಬಹಳ ಸಮಂಜಸವಾದ ಮತ್ತು ದೀರ್ಘವಾದ ಉತ್ತರವನ್ನು ನಾನು ಕೊಡುತ್ತೇನೆ. ಮತ್ತು at the same time ದಲ್ಲಿ ಎಸ್.ಎ. ಜಡ್ ನ್ನು ಮಂಗಳೂರಿನಲ್ಲಿ ಮಾಡತಕ್ಕಂಥವರ ಬಗ್ಗೆ ಈಗಾಗಲೇ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದೇವೆ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಸರ್ಕಾರ ಏಕಾಏಕಿ ತಾಲ್ಲೂಕು ಕೈಗಾರಿಕಾ ಕೇಂದ್ರಗಳನ್ನು ಮುಚ್ಚಿದೆ. ಈಗ ಜಿಲ್ಲಾ ಕೇಂದ್ರಕ್ಕೆ ನಿರುದ್ಯೋಗಿ ಯುವಕರು ಅರ್ಜಿ ಸಲ್ಲಿಸಲ್ಲಿಸಲಿಕ್ಕೆ ಮತ್ತು ಮಾಹಿತಿ ಪಡೆದುಕೊಳ್ಳುವುದಕ್ಕೆ ಹಾಗೂ ಸಂದರ್ಶನಕ್ಕೆ ಹೋಗ ಬೇಕಾಗಿದೆ. ನಮ್ಮ ಪುತ್ತೂರಿನಿಂದ ಮಂಗಳೂರಿಗೆ ಹೋಗಿಬರಬೇಕಾದರೆ ಸಾಧಾರಣವಾಗಿ 280 ಕಿ.ಮೀ. ಆಗುತ್ತದೆ, ಒಬ್ಬ ನಿರುದ್ಯೋಗಿ ಯುವಕರು ಇಲ್ಲಿಗೆ ಸುಮಾರು ಕೈಗಾರಿಕಾ ಕೇಂದ್ರಗಳನ್ನು ಮತ್ತೆ ಪ್ರಾರಂಭ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥದ್ದು ಪ್ರತ್ಯೇಕವಾದ ಪ್ರಶ್ನೆ ಹಾಕಬೇಕಾಗುತ್ತದೆ. ಆದರೆ, ಮಾನ್ಯ ಗೌರವಾನ್ವಿತ ಸದಸ್ಯರು ಮೊದಲನೇ ಬಾರಿಗೆ ಇಲ್ಲಿಗೆ ಗೆದ್ದು ಬಂದಿರುವುದರಿಂದ ನಾನು ಅವರಿಗೆ ಈ ಸಂದರ್ಭದಲ್ಲಿ ಅವರ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಆಡಳಿತ ಸುಧಾರಣೆಯ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಯಾವ್ಯಾವಾ ಇಲಾಖೆಯಲ್ಲಿ ಎಷ್ಟೆಷ್ಟು ಜನರನ್ನು ಕಡಿಮೆ ಮಾಡಿದರೆ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಕಡಿಮೆಯಾಗುತ್ತದೆ ಮತ್ತು ಇದರಿಂದ ಸರ್ಕಾರದ ಮೇಲಿನ ಹೊರೆಯೂ ಕೂಡ ಕಡಿಮೆಯಾಗುತ್ತದೆ ಎಂದು ಅವರು ನೀಡಿದ ತಕ್ಕಂಥ ವರದಿಯ ಶಿಫಾರಸ್ಸಿನ ಮೇಲೆ ಸುಮಾರು ಆರೇಳು ತಿಂಗಳ ಹಿಂದೆಯೇ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡು ತಾಲ್ಲೂಕು ಕೈಗಾರಿಕಾ ಕೇಂದ್ರಗಳನ್ನು ಮುಚ್ಚಬೇಕು. ಏಕೆಂದರೆ ಅಲ್ಲಿರತಕ್ಕಂಥವರಿಗೆ ಏನು ಕೆಲಸವಿಲ್ಲವೆಂದು ಈ ತೀರ್ಮಾನ ತೆಗೆದುಕೊಂಡಿದ್ದಾರೆ. ಆದ್ದರಿಂದ ತತ್‌ಕ್ಷಣ ಎದ್ದುನಿಂತುಕೊಂಡು ಇದರ ಬಗ್ಗೆ ಮುನರ್ ವಿಮರ್ಶೆ ಮಾಡಿ ಅವರಿಗೆಲ್ಲಾ ಕೆಲಸ ಕೊಡುತ್ತೇನೆ ಎಂದು ಹೇಳುವಂಥ ಸ್ಥಿತಿಯಲ್ಲಿ ನಾನಂತು ಇಲ್ಲ. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಅದೇನೆಂದರೆ, ತಾಲ್ಲೂಕು ಮಟ್ಟದಲ್ಲಿ ಕೈಗಾರಿಕೆಗಳ ಬಗ್ಗೆ ಏನಾದರೊಂದು ವ್ಯವಸ್ಥೆ ಇರಬೇಕಾಗುತ್ತದೆ. ಆದ್ದರಿಂದ ನಾವೆಲ್ಲಾ ಮುಂದಿನ ದಿನಗಳಲ್ಲಿ ಇದರ ಬಗ್ಗೆ ಚರ್ಚೆ ಮಾಡೋಣ. ನಿಮ್ಮ ಸಲಹೆಯನ್ನು ನಾನು ಈಗ ಸ್ವಾಗತ ಮಾಡುತ್ತೇನೆ.

ಬಸವ ಕಲ್ಯಾಣ ಪಟ್ಟಣದ ಸಮಗ್ರ ಅಭಿವೃದ್ಧಿ

51(368) **ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಕೂಬ.(ಬಸವಕಲ್ಯಾಣ)** : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಸವಕಲ್ಯಾಣ ಪುರಸಭೆಯಲ್ಲಿರುವ ವಾರ್ಡ್‌ಗಳ ಸಂಖ್ಯೆ ಎಷ್ಟು ;

ಆ) ಈ ವಾರ್ಡ್‌ಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;

ಇ) ಈ ವಾರ್ಡ್‌ಗಳಲ್ಲಿ ರಸ್ತೆ ಕಾಮಗಾರಿಗಳು, ಒಳಚರಂಡಿ ಕಾಮಗಾರಿಗಳು, ಕುಡಿಯುವ ನೀರಿನ ಸೌಲಭ್ಯ ಹಾಗೂ ಬೀದಿ ದೀಪಗಳ ವ್ಯವಸ್ಥೆ ಹಾಗೂ ಇತರೆ ಕಾಮಗಾರಿಗಳನ್ನು ತೆಗೆದುಕೊಳ್ಳುವ ಸಲುವಾಗಿ ಬಸವಕಲ್ಯಾಣ ಪುರಸಭೆ ಯವರು 500.00 ಲಕ್ಷ ಮೊತ್ತದ ಒಂದು ವಿಸ್ತೃತವಾದ ಅಂದಾಜು ವೆಚ್ಚ ಪತ್ರಿಕೆಯನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿರುವುದು ನಿಜವೇ ;

ಈ) ಬಸವಕಲ್ಯಾಣ ಪಟ್ಟಣವು ಒಂದು ಇತಿಹಾಸ ಪ್ರಸಿದ್ಧವಾಗಿದ್ದು ಪ್ರತಿದಿನ ಇಲ್ಲಿಗೆ ಸಾವಿರಾರು ಜನ ಪ್ರವಾಸಿಗರು ಭೇಟಿ ನೀಡುತ್ತಿರುವುದರಿಂದ ಇಲ್ಲಿ ಮೂಲ ಭೂತ ಸೌಕರ್ಯಗಳನ್ನು ಕಲ್ಪಿಸುವುದು ಅತ್ಯಗತ್ಯವಾಗಿರುವುದು ನಿಜವಲ್ಲವೇ ;

ಉ) ಹಾಗಿದ್ದಲ್ಲಿ, ಪುರಸಭೆಯವರು ಈ ಪಟ್ಟಣದ ಸಮಗ್ರ ಅಭಿವೃದ್ಧಿಗಾಗಿ ತಯಾರಿಸಿ ಕಳುಹಿಸಿರುವ ಅಂದಾಜು ವೆಚ್ಚದ ಪ್ರಸ್ತಾವನೆಗೆ ಅನುಮೋದನೆ ನೀಡಿ ಇದಕ್ಕೆ ಅಗತ್ಯವಿರುವ 5.00 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗುವುದೇ :

ಊ) ಹಾಗಿದ್ದಲ್ಲಿ ಈ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು) :

ಅ) 27.

ಆ) ಬಸವಕಲ್ಯಾಣ ಪಟ್ಟಣದ ಇತಿಹಾಸ ಪ್ರಸಿದ್ಧತೆಯನ್ನು ಗಮನದಲ್ಲಿಟ್ಟುಕೊಂಡು ಇದರ ಅಭಿವೃದ್ಧಿಗಾಗಿ ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಮಾದರಿಯಲ್ಲಿ ಒಂದು ಪ್ರಾಧಿಕಾರವನ್ನು ರಚಿಸಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ.

ಇ) ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ಈ) ಹೌದು.

ಉ) ಈ ಬಗ್ಗೆ ಪ್ರಸ್ತಾವನೆ ಬಂದ ನಂತರ ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಊ) ಸದ್ಯಕ್ಕೆ ಉದ್ಭವಿಸುವುದಿಲ್ಲ.

ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ : ಮಾನ್ಯ ಅಧ್ಯಕ್ಷರೆ, ಬಸವಕಲ್ಯಾಣ ಪಟ್ಟಣದ ಇತಿಹಾಸದ ಪ್ರಸಿದ್ಧತೆಯನ್ನು ಗಮನದಲ್ಲಿಟ್ಟುಕೊಂಡು ಇದರ ಅಭಿವೃದ್ಧಿಗಾಗಿ ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಮಾದರಿಯಲ್ಲಿ ಒಂದು ಪ್ರಾಧಿಕಾರವನ್ನು ರಚಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ ಎನ್ನತಕ್ಕಂಥದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೆ, ಬಸವಕಲ್ಯಾಣ ಪಂಚಾಯತಿ ನೀರು ಸರಬರಾಜು ಒಳಚರಂಡಿ ಮಂಡಳಿಯವರು ಸುಮಾರು 5 ಕೋಟಿ ರೂಪಾಯಿಗಳ ಒಂದು ಅಂದಾಜನ್ನು ತಯಾರು ಮಾಡಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ನಿರ್ಮಾಣಕ್ಕೆ ಮತ್ತು ಬೀದಿ ದೀಪಗಳ ವ್ಯವಸ್ಥೆ ಬಗ್ಗೆ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆಂದು ತಿಳಿದು ಬಂದಿದೆ. ಆದರೆ, ಇದು ನನಗೆ ಇನ್ನೂ ಬಂದಿಲ್ಲ. ಆದರೆ ಬಸವಕಲ್ಯಾಣಕ್ಕೊಂದು ಇತಿಹಾಸವಿರುವುದರಿಂದ ಈಗ ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರವನ್ನು ಯಾವ ರೀತಿ ಅಭಿವೃದ್ಧಿ ಮಾಡಲಾಗಿದೆಯೇ, ಅದೇ ಪ್ರಕಾರ ಈ ಬಸವಕಲ್ಯಾಣಕ್ಕೂ ಕೂಡ ಒಂದು ಅಭಿವೃದ್ಧಿ ಪ್ರಾಧಿಕಾರವನ್ನು ಸರ್ಕಾರ ಕೂಡಲೇ ಮಾಡುತ್ತದೆ. ಇದು ಆದಮೇಲೆ ಅಭಿವೃದ್ಧಿ ಕೆಲಸವನ್ನು ಅಲ್ಲಿ ಪ್ರಾರಂಭ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ : ಮಾನು ಅಧ್ಯಕ್ಷರೆ, ಐ.ಡಿ.ಎ. ಸಮಿತಿಯ ಪ್ರೊಪೋಜಲ್‌ನ್ನು ಕೇಂದ್ರ ಸರ್ಕಾರಕ್ಕೆ ದಿನಾಂಕ 9–07–2004ರಲ್ಲಿ ಹೋಗಿದೆ. ಆದರೂ ಕೂಡ 319

ಲಕ್ಷ 99 ಸಾವಿರ ರೂಪಾಯಿ ಇನ್ನೂ ಕೇಂದ್ರ ಸರ್ಕಾರದಿಂದ ಬಂದಿಲ್ಲ. ಆದ್ದರಿಂದ ಮಾನ್ಯ ಸಚಿವರು ಸ್ವಲ್ಪ ಗಮನಹರಿಸಿ ಕೇಂದ್ರ ಸರ್ಕಾರದಿಂದ ದಯವಿಟ್ಟು ಫಂಡನ್ನು ರಿಲೀಜ್ ಮಾಡಿಸಬೇಕೆಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಮೋರೆ : ಇದರ ಬಗ್ಗೆ ನನ್ನ ಹತ್ತಿರ ಯಾವುದೇ ಪ್ರಸ್ತಾವನೆ ಬಂದಿಲ್ಲ. ಅದಗ ಬಗ್ಗೆ ನಾನು ಗಮನಹರಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖಬಾ : ಮಾನ್ಯ ಅಧ್ಯಕ್ಷರೆ. ಬಸವಕಲ್ಯಾಣ ಪಟ್ಟಣದಲ್ಲಿ ಅಭಿವೃದ್ಧಿ ಕಾರ್ಯಗಳಲ್ಲಿ ಇನ್ನೂ ಸ್ವಲ್ಪ ವಿಳಂಬವಾಗುತ್ತಿದೆ. ಕಾರಣ ಏನೆಂದರೆ, ಅಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಆದ್ದರಿಂದ ಎಲ್ಲಾ ಹುದ್ದೆಗಳನ್ನು ದಯವಿಟ್ಟು ಭರ್ತಿಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಸಿ, ರಾಜೇಂದ್ರವರ್ಮ : ಮಾನ್ಯ ಅಧ್ಯಕ್ಷರೆ, ಬಸವಕಲ್ಯಾಣ ತಾಲ್ಲೂಕು ನನ್ನ ಕ್ಷೇತ್ರಕ್ಕೂ ಸಂಬಂಧವಿರುವುದರಿಂದ ಮಾನ್ಯ ಮಲ್ಲಿಕಾರ್ಜುನ ಸಿದ್ರಾಮಪ್ಪ ಖಬಾರವರು ಪ್ರಸ್ತಾಪ ಮಾಡಿರತಕ್ಕಂಥ ಪ್ರಶ್ನೆಗೆ ನಾನೂ ಸಹ ಒತ್ತುಕೊಡಬೇಕಾಗುತ್ತದೆ. ಬಸವಕಲ್ಯಾಣ ತಾಲ್ಲೂಕಿನಲ್ಲಿ ವಿಶ್ವಗುರು ಬಸವಣ್ಣನವರು ಕಾಯಕ ನಡೆಸಿದಂಥ ಒಂದು ಕ್ಷೇತ್ರ. ಮತ್ತು ಇಲ್ಲಿ ಬಹಳಷ್ಟು ಪ್ರಸಿದ್ಧರಾದಂಥ ಮತ್ತು ಪುರಾತನವಾಗಿರತಕ್ಕಂಥ ಗುಹೆಗಳು ಮತ್ತು ಶಿಲ್ಪಿಗಳು ಹಾಗೂ ಅನುಭವ ಮಂಟಪ ಕೂಡ ಇದೆ. 12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಸರ್ವ ಧರ್ಮ ಸಮಭಾವನೆ ಎಂದು ಹೋರಾಟ ಮಾಡಿ ಇಡೀ ಜಗತ್ತಿಗೆ ಮಾದರಿಯಾದ ಮಹಾನ್ ವ್ಯಕ್ತಿಗಳು. ಇಂಥ ಒಂದು ಸ್ಥಳದಲ್ಲಿ ಬಸವಕಲ್ಯಾಣ ತಾಲ್ಲೂಕು ಯಾವ ಮಟ್ಟದಲ್ಲಿರಬೇಕಾಗಿತ್ತೋ ಆ ಮಟ್ಟದಲ್ಲಿ ಇವತ್ತಿನ ದಿವಸ ಇಲ್ಲ. ಎರಡನೆಯದಾಗಿ ಇದನ್ನು ಟೂರಿಸಂ ಡಿಪಾರ್ಟ್‌ಮೆಂಟ್‌ಗೆ ಸೇರಿಸಿ ಅಲ್ಲಿ ಅಲ್ಲಿನ ಬಿಡಿಎ ಗೆ ಛೇರ್ಮನ್‌ರವರನ್ನು ನೇಮಕ ಮಾಡಬೇಕು. 12ನೇ ಶತಮಾನದಲ್ಲಿ ಬಸವಣ್ಣನವರು ಮಹತ್ವದ ಕೆಲಸವನ್ನು ಬಸವಕಲ್ಯಾಣದಲ್ಲಿ ಮಾಡಿದ್ದಾರೆ. ಆದ್ದರಿಂದ ಇಂಥ ಒಂದು ಸ್ಥಾನಕ್ಕೆ ಮಹತ್ವ ಕೊಟ್ಟು ಅಲ್ಲಿ ಹೆಚ್ಚಿನ ಪ್ರಗತಿ ಮಾಡಬೇಕೆಂಬುದು ನಮ್ಮ ಉದ್ದೇಶ. ಆದರೆ, ವರ್ಷಕ್ಕೊಂದು ಸಾರಿ ಅಲ್ಲಿಗೆ ಛೇರ್ಮನ್ ನೇಮಕ ಮಾಡುವುದು ಮತ್ತು ತೆಗೆಯುವುದು ಹಾಗೂ ಇಷ್ಟು ದುಡ್ಡು ಮಂಜೂರಾಗಿದೆ ಎಂದು ಹೇಳುವುದು. ಅಂದರೆ ಇದೆಲ್ಲಾ ಜನರ ಕಣ್ಣಿಗೆ ಮಣ್ಣೆರೆಚುವ ಕೆಲಸವನ್ನು ಸರ್ಕಾರದವರು ಮಾಡುತ್ತಿದ್ದಾರೆ. ದಯವಿಟ್ಟು ಈ ರೀತಿಯಾಗಬಾರದು. ಈ ಒಂದು ಕ್ಷೇತ್ರಕ್ಕೆ ಹೆಚ್ಚು ಮಹತ್ವ ಕೊಟ್ಟು ಟೂರಿಸಂ ಡಿಪಾರ್ಟ್‌ಮೆಂಟ್‌ನಲ್ಲಿ ಇದನ್ನು ಸೇರಿಸಿ ಕ್ಕೊಂಡು ಹೆಚ್ಚು ಖರ್ಚು ಮಾಡಿ ಈ ಒಂದು ಸ್ಥಳಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಈ ಒಂದು ಕಾರ್ಯವನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಸಿ. ರಾಜೇಂದ್ರವರ್ಮ : ಮಾನ್ಯ ಸಚಿವರು ಇದರ ಬಗ್ಗೆ ತಿಳಿದುಕೊಂಡಿಲ್ಲ. ಆದ್ದರಿಂದ, ಇದಕ್ಕೆ ಅವರೇನು ಉತ್ತರ ಕೊಡುತ್ತಾರೆ. ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಸಿಂಧ್ಯರವರು ಅಲ್ಲಿ ಕುಳಿತುಕೊಂಡು ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಉತ್ತರ ಕೊಡಿ ಎಂದು ಹೇಳಿಕೊಡುತ್ತಿದ್ದಾರೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಸದಸ್ಯರು ಏನು ಸಪ್ಲಿಮೆಂಟರಿ ಕೊಶ್ಚನ್ ಕೇಳಿರತಕ್ಕಂಥದ್ದು ನನಗೆ ಗೊತ್ತಿಲ್ಲ. ಅವರು ಹೇಳಿರತಕ್ಕಂಥದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರಿಗೆ ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ. ನಿಜವಾಗಿಯೂ ಕೂಡ He is honest.

ಶ್ರೀ ಸಿ. ರಾಜೇಂದ್ರವರ್ಮ : ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಿರುವುದರಿಂದ ನಾವು ಕೇಳಬೇಕಾಗುತ್ತದೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಈ ರೀತಿಯಲ್ಲಿ ಪ್ರಶ್ನೋತ್ತರ ವೇಳೆ ಮಾಡಿದರೆ ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿ ಮುಕ್ಕಾಲು ಗಂಟೆಯಾಗಿದೆ. ಇನ್ನು ನಮ್ಮ 9 ಪ್ರಶ್ನೆ ಇದೆ. ದಯಮಾಡಿ ಎಲ್ಲರೂ ಸಹಕರಿಸಬೇಕು. ಮಾನ್ಯ ಕಟ್ಟಾಸುಬ್ರಮಣ್ಯ ನಾಯ್ಡುರವರೇ, ನಿಮ್ಮ ಪ್ರಶ್ನೆಯನ್ನು ದಯವಿಟ್ಟು ಕೇಳಿ. ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಸಿ. ರಾಜೇಂದ್ರವರ್ಮ : ಮಾನ್ಯ ಅಧ್ಯಕ್ಷರೆ, ತಾವು ಹೊಸಬರಿಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ನಾನು ಮಾನ್ಯ ಕಟ್ಟಾಸುಬ್ರಮಣ್ಯ ನಾಯ್ಡುರವರನ್ನು ಮಾತನಾಡುವುದಕ್ಕೆ ಹೇಳಿದ್ದೇನೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ. ರಾಜೇಂದ್ರವರ್ಮ ; ಇದು ಮಹತ್ವವಾದ ಪ್ರಶ್ನೆ ಇದೆ. ತಾವು ದಯವಿಟ್ಟು ಅವಕಾಶ ಕೊಡಿ. ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಈ ರೀತಿಯಾದರೆ ಪ್ರಶ್ನೋತ್ತರ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಸಿ. ರಾಜೇಂದ್ರವರ್ಮ : ವಿಶ್ವ ಗುರು ಬಸವಣ್ಣನವರು ಮಹಾತ್ಮ ಗೌತಮ ಬುದ್ಧ ಮತ್ತು ಯೇಸುಕ್ರಿಸ್ತರ ಸಾಲಿನಲ್ಲಿ ಬರತಕ್ಕಂಥ ವ್ಯಕ್ತಿ.

ಅಧ್ಯಕ್ಷರು : ಒಂದು ಪ್ರಶ್ನೆಗೆ ಎಲ್ಲರೂ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ನಮ್ಮ ಮುಂದೆ ಇರತಕ್ಕಂಥ ಎಲ್ಲಾ ಪ್ರಶ್ನೆಗಳನ್ನು ಮುಗಿಸುವುದಕ್ಕೆ ಆಗುತ್ತದೆಯೇ ? I cannot understand ಮಾನ್ಯ ಸದಸ್ಯರು ಕೇಳಿರತಕ್ಕಂಥದಕ್ಕೆ ಮಾನ್ಯ ಸಚಿವರು ಬೇಗ ಉತ್ತರ ಕೊಡಿ.

ಶ್ರೀ ಸಿ. ರಾಜೇಂದ್ರವರ್ಮ : ನಿಮ್ಮ ಅಪ್ಪಣೆ ಮೀರಿ ನಾವು ಹೋಗುವುದಿಲ್ಲ. ಆದ್ದರಿಂದ ನಾನು ಕುಳಿತುಕೊಳ್ಳುತ್ತೇನೆ. ಮಾನ್ಯ ಸಿಂಧ್ಯರವರಿಗೆ ಈ ವಿಷಯ ಗೊತ್ತಿದೆ. ಆದ್ದರಿಂದ ಸರ್ಕಾರದ ಪರವಾಗಿ ತಾವು ಅವರಿಗೆ ಹೇಳಿದರೆ ಬಹಳ ಉತ್ತಮವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಮಾನ್ಯ ಸಚಿವರು ಅಧಿವೇಶನ ನಂತರ ಬೀದರ್ ಜಿಲ್ಲೆಗೆ ಬಂದಾಗ ಬಸವಕಲ್ಯಾಣ ತಾಲ್ಲೂಕಿಗೆ ಬರುತ್ತಾರೆ. ಮತ್ತೆ ಇದನ್ನೆಲ್ಲಾ ಪರಿಗಣಿಸುತ್ತಾರೆ. ಮತ್ತು ತಾವು ಹೇಳಿರತಕ್ಕಂಥ ಸಲಹೆಗಳನ್ನು ಮಾನ್ಯ ಸಚಿವರಿಗೆ ತಿಳಿಸಿದ್ದೇನೆ. ಅವರು ಅದನ್ನು ಖಂಡಿತ ಮಾಡುತ್ತಾರೆ.

ದೇವನ ಹಳ್ಳಿ ಬಳಿ ನಿರ್ಮಿಸಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾರ್ಯಪ್ರಗತಿ

52(173) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?